ದಿ.27.06.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರೆದ ಪಾಟೀ ಸವಾಲು: ಶ್ರೀ ಎಂ.ಕೆ., ವಕೀಲರಿಂದ ಅರ್ಜಿದಾರರ ಪರವಾಗಿ ಃ

12. ಈ ಪ್ರಕರಣದಲ್ಲಿ ಹಾಜರುಪಡಿಸಿರುವಂತಹ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಅರ್ಜಿದಾರರು ನನಗೆ 18 ವರ್ಷಗಳಿಂದ ಕಂಟ್ರಾಕ್ಟರ್ ಹತ್ತಿರ ಕೆಲಸ ಮಾಡುತ್ತಿದ್ದಾರೆ ಅಂತ ಹೇಳಿದರು. ಅರ್ಜಿದಾರರು ಎಲ್ಲಿ ಕೆಲಸ ಮಾಡುತ್ತಿದ್ದರು ನನಗೆ ಗೊತ್ತಿಲ್ಲ. ಅರ್ಜಿದಾರರು ತ್ಯಾವಣಿಗೆಯ ಕೆ ಪಿ ಟಿ ಸಿ ಎಲ್ ಸಬ್ ಸ್ಟೇಷನ್ ನಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದಾರೆ. ಸಬ್ ಸ್ಟೇಷನ್ ನಲ್ಲಿ ಕಂಟ್ರಾಕ್ಟ್ ಮೂಲಕ ಅರ್ಜಿದಾರರು ಕೆಲಸ ಮಾಡಿದ್ದಾರೆ. ಅರ್ಜಿದಾರರು ನಿರಂತರವಾಗಿ 1999 ರಿಂದ 2018 ವರೆಗೂ ತ್ಯಾವಣಿಗೆ ಸಬ್ ಸ್ಟೇಷನ್ ನಲ್ಲಿಕೆಲಸ ಮಾಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಕಾಂಟ್ರಾಕ್ಟ್ ಆಧಾರದ ಮೇಲೆ ಯಾರು ಯಾರಿಗೆ ಕೆಲಸಕ್ಕೆ ನೇಮಿಸಿದ ಬಗ್ಗೆ ಸಬ್ ಸ್ಟೇಷನ್ ಅಧಿಕಾರಿಗೆ ವಿವರಣೆ ನೀಡಬೇಕಾಗುತ್ತದೆ ಎಂದರೆ ನಿಜ. 1999 ರಿಂದ 2018 ರ ಅವಧಿಯಲ್ಲಿ 5-6 ಗುತ್ತಿಗೆದಾರರನ್ನು ಕಾಂಟ್ರಾಕ್ಟ್ ಆಧಾರದ ಮೇಲೆ ಕೆಲಸಗಾರರನ್ನು ಕೊಟ್ಟಿದ್ದಾರೆ. ಎಲ್ಲಾ ಕಂಟ್ರಾಕ್ಟ್ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನ್ಯಾಯಾಲಯಕ್ಕೆ ನಾನು ಕೇವಲ ಅನು ಪವರ್ಸ್, ಎಸ್ ಆರ್ ಎಲೆಕ್ಟ್ರಿಕಲ್ಸ್ ಮತ್ತು ವಿಮಲ್ ಎಲೆಕ್ಟ್ರಿಕಲ್ಸ್ ರವರ ಕಂಟ್ರಾಕ್ಟ್ ಆಧಾರಿತ ಮೇಲೆ ನೇಮಿಸಿಕೊಂಡ ದಾಖಲೆಗಳನ್ನು ಮಾತ್ರ ಹಾಜರು ಮಾಡಿದ್ದೇನೆ ಎಂದರೆ ನಿಜ. ಉಳಿದ ಕಂಟ್ರಾಕ್ಟ್ ಆಧಾರಿತ ಕೆಲಸಗಾರರನ್ನು ನೇಮಿಸಿದ ಬಗ್ಗೆ ನಾನು ದಾಖಲೆಗಳನ್ನು ಹಾಜರು ಮಾಡಿಲ್ಲ. 1999 ರಿಂದ 2018 ನಲ್ಲಿ ಆರ್ಜಿದಾರರನ್ನು ಕೆಲಸದಿಂದ ತೆಗೆಯುವರೆಗೂ ಕಂಟ್ರಾಕ್ಟರ್ ಗಳು / ಗುತ್ತಿಗೆದಾರರ ವಿವರಣೆಗಳು ಇದೆಯೇ ಎಂದರೆ, ನಾನು ಅದನ್ನುಪರೀಶೀಲನೆ ಮಾಡಬೇಕು ಎನ್ನುತ್ತಾರೆ. ಯಾವುದೇ ಕಂಟ್ರಾಕ್ಟರ್ ನ ನೇಮಕವಾದಲ್ಲಿ ಅವರ ಲೈನ್ ಕ್ಲಿಯರೆನ್ಸ್ ಬುಕ್, ಲಾಗ್ ಬುಕ್, ಅಟೆಂಡೆಂನ್ಸ್ ರಿಜಿಸ್ಟರ್ ಗಳನ್ನು ಮೇಂಟೇನ್ ಮಾಡುತ್ತಾರೆ ಎಂದರೆ ನಿಜ.

ಪ್ರಶ್ನೆ: ಹಾಜರಾತಿ ಪುಸ್ತಕದ ಆಧಾರದ ಮೇಲೆ ನೀವು ಗುತ್ತಿಗೆದಾರರಿಗೆ ಪೇಮೆಂಟ್ ಮಾಡುತ್ತೀರಾ?

ಉತ್ತರ: ಅಟೆಡೆನ್ಸ್ ರಿಜಿಸ್ಟರ್ ಇರುವುದಿಲ್ಲ, ಒಂದು ಎಕ್ಸ್‌ಟ್ರಾಕ್ಟ್ ನ್ನು ಕೊಟ್ಟಿದ್ದರ ಮೇಲೆ ಬಿಲ್ ಮಾಡುತ್ತೇವೆ.

ಸದರಿ ಅವದಿಗೆ ಸಂಬಧಿಸಿದಂತೆ ನಾನು ಹೇಳಿದಂತಹ ಎಕ್ಸ್ ಟ್ರಾಕ್ಟ್ ನ್ನು ನಾನು ಹಾಜರು ಮಾಡಿಲ್ಲ. ಗುತ್ತಿಗೆದಾರರು ಎಕ್ಸ್ ಟ್ರಾಕ್ಟ್ ನಲ್ಲಿ ಎಷ್ಟು ಕೆಲಸಗಾರರು ಕೆಲಸ ಮಾಡುತ್ತಿರುವ ಬಗ್ಗೆ ವಿವರಣೆ ನೀಡಿದ ನಂತರ ನಾವು ಅದಕ್ಕೆ ಬಿಲ್ ಮಾಡಿ ಕಂಟ್ರಾಕ್ಟರ್ ಅಕೌಂಟಿಗೆ ಹಣ ಜಮಾ ಮಾಡುತ್ತೇವೆ. ಯಾವ ಕಂಟ್ರಾಕ್ಟರ್ ಮೇ ಹೇಳಿದ ಎಕ್ಸ್ ಟ್ರಾಕ್ಟ್ ನ್ನು ನೀಡುತ್ತಾರೆ ಆ ಆಧಾರದ ಮೇಲೆ ನಾವು ಕಂಟ್ರಾಕ್ಟರ್ ಅಕೌಂಟ್ ಗೆ ಹಣ ಜಮಾ ಮಾಡುತ್ತೇವೆ ಮತ್ತು consolidated ಅಮೌಂಟ್ ನೀಡುವುದಿಲ್ಲ ಅಂದರೆ ನಾವು consolidated ಅಮೌಂಟ್ ನೀಡುತ್ತೇವೆ. ಸಾಕ್ಷಿದಾರರು ಮುಜಂದುವರೆದು ಹೇಳುತ್ತಾರೆ ಆ ಜಾಗದಲ್ಲಿ ಕೆಲಸಗಾರರು ಕೆಲಸ ಮಾಡಿರಲೇಬೇಕು ಆಗ ಮಾತ್ರ ನಾವು consolidated amount ಕೊಡುತ್ತೇವೆ. ಮುಂದುವರೆದು ಒಂದು ವೇಳೆ ಆ ಜಾಗದಲ್ಲಿ ಕೆಲಸಗಾರರು ಇರದೇ ಇದ್ದರೆ ಬೇರೆ ಕೆಲಸಗಾರರನ್ನು ನೇಮೀಸಲೇ ಬೇಕಾಗುತ್ತದೆ.

13. ದಿನಾಂಕ: 19.03.2018 ರಲ್ಲಿ ನಾನು ತ್ಯಾವಣಿಗೆ ಸಬ್ ಸ್ಟೇಷನ್ ನಲ್ಲಿ ಕೆಲಸ ಮಾಡುತ್ತಿರಲಿಲ್ಲ. ಆ ಸಮಯದಲ್ಲಿ ಹರೀಶ್ ಕುಮಾರ್ ಎನ್ನುವವರು ಕೆಲಸ ಮಾಡುತ್ತಿದ್ದರು. ಸದರಿಯವರು ಇನ್ನೂ ಕೆ ಪಿ ಟಿ ಸಿ ಎಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈಗ ಅವರು ಕೆ ಪಿ ಟಿ ಸಿಎಲ್ ಚಿತ್ರದುರ್ಗದಲ್ಲಿ ಇದ್ದಾರೆ. ಅರ್ಜಿದಾರರರಿಗೆ ಕೆಲಸಕ್ಕೆ ಬರಬಾರದು ಅಂತ ಮೆಮೊವನ್ನು ದಿನಾಂಕ: 19.03.2018 ರಂದು ನಾವು ಕೊಟ್ಟಿರಲಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಅರ್ಜಿದಾರರು ಗುತ್ತಿಗೆದಾರರ ಕೈ ಕೆಳಗೆ ಕೆಲಸ ಮಾಡುತ್ತಾರೆ. ಆ ದಿನ ಇದ್ದ ಗುತ್ತಿಗೆದಾರರು ಅನು ಪವರ್ಸ್ ಇಂಜಿನಿಯರ್ಸ್. ಅನು ಪವರ್ಸ್

ಇಂಜಿನಿಯರ್ಸ್ ರವರು ಅರ್ಜಿದಾರರರಿಗೆ ಈ ದಿನದಿಂದ ಕೆಲಸಕ್ಕೆ ಬರಬಾರದು ಅಂತ ನೋಟೀಸ್ ನೀಡಿರುವುದಿಲ್ಲ.

14. ಅರ್ಜಿದಾರರು ಹಾಜರುಪಡಿಸಿರುವ ನಿಪಿ-1 ರಿಂದ 52 ದಾಖಲೆಗಳನ್ನು ನಾನು ನೋಡಿದ್ದೇನೆ. ಅರ್ಜಿದಾರರು 1999 ರಿಂದ 2018 ರ ಅವಧಿಯಲ್ಲಿ ಯಾವುದೇ ಗುತ್ತಿಗೆದಾರರು ಇದ್ದರೂ ಸಹಿತ ನಿರಂತರವಾಗಿ ಕೆಲಸ ಮಾಡುತ್ತಿರುವ ಬಗ್ಗೆ ನಿಪಿ-1 ರಿಂದ 52 ದಾಖಲೆಗಳಲ್ಲಿ ಕಂಡು ಬರುತ್ತದೆ ಎಂದರೆ ಅರ್ಜಿದಾರರ ದಾಖಲೆಗಳನ್ನು ನಾನು ನೋಡಿದ್ದೇನೆ. ಕಂಟ್ರಾಕ್ಟ್ ಕೆಲಸದಲ್ಲಿ ಕೆಲಸಗಾರರನ್ನು ಕೆಲಸಕ್ಕೆ ಕಳುಹಿಸುವ ಬಗ್ಗೆ ಮಾತ್ರ ಇರುತ್ತದೆ ಎಂದರೆ, ಅವರು ಆ ಸ್ಟೇಷನ್ ಮೇಂಟೇನ್ ಮಾಡಬೇಕಾಗಿರುತ್ತದೆ. ಕೆ ಪಿ ಟಿ ಸಿ ಎಲ್ ಕೊಟ್ಟ ನಿರ್ದೇಶನದಂತೆ ಕಂಟ್ರಾಕ್ಟ್ ಕೆಲಸ ಮಾಡಬೇಕಾಗುತ್ತದೆ. ದಿನನಿತ್ಯದ ಕೆಲಸದಲ್ಲಿ ಕಂಟ್ರಾಕ್ಟ್ ರವರ ಕೆಲಸಗಾರರು ಒಂದು ಕಡೆ ಮತ್ತು ನಮಗೆ ಸಂಬಧಿಸಿದ ಅಧಿಕಾರಿಗಳು ಕೆಲಸಗಾರರಿಗೆ ಸೂಪರ್ ವೈಸ್ ಮಾಡುತ್ತಾರೆ ಎಂದರೆ ನಿಜ. ನಾವು ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ..ಗಳನ್ನು ಮಾತ್ರ ನಾವು ಕಂಟ್ರಾಕ್ಟ್ ಮೂಲಕ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ ಎಂದರೆ ನಿಜ.

ಅರ್ಜಿದಾರರು ಐ ಟಿ ಐ ಎಲೆಕ್ಟ್ರಿಕಲ್ ಮಾಡಿದ್ದಾರೆ. ಸದರಿ ಕೆಲಸಕ್ಕೆ ಐಟಿಐ ಎಲೆಕ್ಟ್ರಿಕಲ್, ಜೆ ಓ ಡಿ ಸಿ ಎಲೆಕ್ಟ್ರಿಕಲ್ ಅರ್ಹತೆ ಹೊಂದಿರುತ್ತಾರೆ. ಅರ್ಜಿದಾರರು ಜೆ ಓ ಡಿ ಸಿ ಎಲೆಕ್ಟ್ರಿಕಲ್ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಆ ಬಗ್ಗೆ ದಾಖಲೆ ಪರೀಶೀಲನೆ ಮಾಡಬೇಕಾಗುತ್ತದೆ. ಅರ್ಜಿದಾರರ ವಿದ್ಯಾಭ್ಯಾಸದ ಬಗ್ಗೆ ನಾನು ದಾಖಲೆಗಳನ್ನು ಪರೀಶೀಲನೆ ಮಾಡಿರುವುದಿಲ್ಲ. ಅರ್ಜಿದಾರರು ಸೂಕ್ತವಾದ ಅರ್ಹತೆ ಇದ್ದು ನೇಮಕವಾಗಿದ್ದಾರೆ ಎಂದು ಗೊತ್ತಿದ್ದರೂ ಸಹಿತ ಅವರ ವಿದ್ಯಾರ್ಹತೆ ಬಗ್ಗೆ ನನಗೆ ಗೊತ್ತಿಲ್ಲ ಅಂತ ಈ ಪ್ರಕರಣದಲ್ಲಿ ಅನಾನುಕೂಲತೆ ಆಗುತ್ತದೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. I am aware that, the payment for worker is in terms of Payment of Wages Act and Minimum Wages Act.

15. ಈಗ ನನಗೆ ತೋರಿಸಿದ R-6 ರ 2 ನೇ ಪುಟದಲ್ಲಿ ಹಲವಾರು ಕಾಲಂಗಳು ಖಾಲಿ ಇವೆ ಎಂದರೆ ನಿಜ. ನಿಶಾನೆ -R-6 ರಲ್ಲಿಪ್ರತಿ ಪುಟಕ್ಕೂ ಉಭಯ ಪಕ್ಷಗಾರರು ಸಹಿ ಮಾಡಬೇಕಾಗುತ್ತದೆ ಎಂದರೆ ನಿಜ. ಅಪೂರ್ಣವಾದಂತಹ ದಾಖಲೆಗಳನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ಅರ್ಜಿದಾರರು ಕೆ ಪಿ ಟಿ ಸಿಎಲ್ ವಿದ್ಯುತ್ ವಿತರಣ ಗುತ್ತಿಗೆ ಕಾರ್ಮಿಕರ ಸಂಘದ ಕಾರ್ಯದರ್ಶಿ ಎಂದರೆ ನನಗೆ ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಗಾಗಿ ಅರ್ಜಿದಾರರು ಸಲ್ಲಿಸಿರುವ ಪ್ರಮಾಣಪತ್ರವನ್ನು ನಾನು ನೋಡಿದ್ದೇನೆ. ಆ ಪ್ರಮಣಪತ್ರದಲ್ಲಿ ಅರ್ಜಿದಾರರು ಸದರಿ ಸಂಘದ ಕಾರ್ಯದರ್ಶಿ ಎಂಬುದಾಗಿ ನಮೂದು ಮಾಡಿರುತ್ತಾರೆ, ಆ ವಿಷಯ ನನಗೆ ಗೊತ್ತಿದ್ದರೂ ಸಹಿತ ಉದ್ದೇಶಪೂರ್ವಕವಾಗಿ ನಾನು ಅದರ ಬಗ್ಗೆ ನಾನು ಏನೂ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಖಂಡಿಕೆ ನಂ 6 ರಲ್ಲಿ ಅರ್ಜಿದಾರರಿಗೆ ಕಲಸದಿಂದ ವಜಾಗೊಳಿಸಿದ ಬಗ್ಗೆ ನಮೂದು ಮಾಡಿಲ್ಲ.

ಈ ಹಂತದಲ್ಲಿ ವಕೀಲರು ಸಮಯ ಕೋರಿದ್ದರಿಂದ, ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.